**ದಿನಾಂಕಃ 28/06/2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಾದಿ ಪರ ವಕೀಲರಿಂದಃ**

ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದೇನೆ. ಅದರಲ್ಲಿ ಬರೆದಿರುವ ಅಂಶಗಳು ಸತ್ಯವಾಗಿದೆ. ಅದನ್ನು ನಾನೇ ನನ್ನ ವಕೀಲರಿಗೆ ಹೇಳಿ ಬರೆಸಿದ್ದು, ಅದರಲ್ಲಿ ನನ್ನ ಸಹಿ ಇದೆ.

ನಾನು ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿದ್ದೇನೆ. ಅವುಗಳನ್ನು ಈ ಕೆಳಕಂಡಂತೆ ಗುರುತಿಸಲಾಯಿತು.

1. ದಿಃ 28/05/2019 ರ ನೊಂದಾಯಿತ ಸ್ವಾಧೀನ ರಹಿತ ಕ್ರಯದ ಕರಾರು ಪತ್ರವನ್ನು **ನಿಪಿ.1** ಎಂದು, 1 ನೇ ಪ್ರತಿವಾದಿಯ ಸಹಿಗಳನ್ನು **ನಿಪಿ.1(ಎ)** ಯಿಂದ **(ಸಿ)** ಎಂದು, 2 ನೇ ಪ್ರತಿವಾದಿಯ ಸಹಿಗಳನ್ನು **ನಿಪಿ.1(ಡಿ)** ಯಿಂದ **(ಎಫ್)**ಎಂದು, 3 ನೇ ಪ್ರತಿವಾದಿಯ ಸಹಿಗಳನ್ನು **ನಿಪಿ.1(ಜಿ)** ಯಿಂದ **(ಐ)** ಎಂದು, ವಾದಿಯ ಸಹಿಗಳನ್ನು **ನಿಪಿ.1(ಜೆ)** ಯಿಂದ **(ಎಲ್)** ಎಂದು, ಸಾಕ್ಷಿದಾರರ ಸಹಿಗಳನ್ನು **ನಿಪಿ.1(ಎಂ)** ಮತ್ತು **(ಎನ್)** ಎಂದು, ಪತ್ರ ಬರಹಗಾರರ ಸಹಿಯನ್ನು **ನಿಪಿ.1(ಒ)** ಎಂದು ಗುರುತಿಸಲಾಯಿತು.

2. ದಿಃ 17/05/2021 ರ ತಿಳುವಳಿಕೆ ಪತ್ರವನ್ನು **ನಿಪಿ.2** ಎಂದು,

3. ಮೂರು ಅಂಚೆ ರಸೀದಿಗಳನ್ನು **ನಿಪಿ.3 ರಿಂದ 5** ಎಂದು,

4. ಮೂರು ಅಂಚೆ ಸ್ವೀಕೃತಿಗಳನ್ನು **ನಿಪಿ.6 ರಿಂದ 8** ಎಂದು,

5. ಸರ್ವೆ ನಂಬರ್ 61/6 ರ ಆರ್.ಟಿ.ಸಿ.ಯನ್ನು **ನಿಪಿ.9** ಎಂದು,

6. ಸರ್ವೆ ನಂಬರ್ 61/7 ರ ಆರ್.ಟಿ.ಸಿ.ಯನ್ನು **ನಿಪಿ.10** ಎಂದು ಗುರುತಿಸಲಾಯಿತು.

ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.

**ತೆರದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**ಹಿ.ಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
ಪಿರಿಯಾಪಟ್ಟಣ.